# <u>ಕರ್ನಾಟಕ ಸರ್ಕಾರದ ನಡವಳಿ</u>

<u>ವಿಷಯ:</u> ಸರ್ಕಾರಿ ನೌಕರರಾದ ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ಸಿದ್ದಾಪುರ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ ಆರ್ ನಾಗರಾಜು ರವರು ಕರ್ತವ್ಯ ಲೋಪ/ದುರ್ವರ್ತನೆ ಎಸಗಿರುವ ಬಗ್ಗೆ.

<u>ಓದಲಾಗಿದೆ:</u> 1. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ:ಕಂಪ್ಲೇಂಟ್/ಉಪಲೋಕ್/ಬಿಡಿ–151/2017/ಎಆರ್‌ಎಲ್‌ಓ–2, ದಿನಾಂಕ: 07–08–2017.

2. ಮಾನ್ಯ ಉಪಲೋಕಾಯುಕ್ತರವರ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಡಿ/151/2017/ಸನಿಕಾಸ–2, ದಿನಾಂಕ: 27–07–2017.

## <u>ಪ್ರಸ್ತಾವನೆ:</u>

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3) ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ: 27.07.2017ರ ವರದಿಯಲ್ಲಿ ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ಸಿದ್ದಾಪುರ ನಿವಾಸಿಯಾದ ಶ್ರೀ ಎಸ್.ಹೆಚ್.ಹನುಮಂತರಾಯಪ್ಪ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ಸಿದ್ದಾಪುರ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ ಆರ್ ನಾಗರಾಜು (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 9 ರಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

## <u>ದೂರಿನ ಸಂಕ್ಷಿಪ್ತ ವಿವರಣೆ:</u>

ದೂರುದಾರರು ತಮ್ಮ ದೂರಿನಲ್ಲಿ ಮಧುಗಿರಿ ತಾಲ್ಲೂಕು ಸಿದ್ದಾಪುರ ಗ್ರಾಮದ ದೂರುದಾರರ ತಂದೆಗೆ ಇಬ್ಬರು ಪತ್ನಿಯರಿದ್ದು, ಹಿರಿಯ ಪತ್ನಿಯ ಮಗ ದಿವಂಗತ ಲಕ್ಷ್ಮೀನರಸಯ್ಯ ಇವರಿಗೆ ಸಂತಾನವಿರುವುದಿಲ್ಲ. ಇವರ ಪತ್ನಿ ತೀರಕೊಂಡಿರುತ್ತಾರೆ. ಈಗ ದೂರುದಾರರ ತಂದೆಯ 2ನೇ ಪತ್ನಿಯ ಮಕ್ಕಳಾದ ದೂರುದಾರರು ಹಾಗೂ ಅವರ ಸಹೋದರ ರಂಗಸ್ವಾಮಯ್ಯ ಮಾತ್ರ ವಾರಸುದಾರರಿದ್ದು, ಆದರೆ ಎದುರುದಾರರು ಅವರಿಂದ ಲಂಚ ಪಡೆದು ಅಕ್ರಮವಾಗಿ ರಂಗಸ್ವಾಮಯ್ಯ ಮಗ ಶ್ರೀರಂಗಯ್ಯನಿಗೆ ಯಾವುದೇ ನೋಂದಾಯಿತ ದಾಖಲೆಯಿಲ್ಲದೆ ಖಾತೆ ಮಾಡಿರುತ್ತಾರೆ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ತಮ್ಮ ಆಕ್ಷೇಪಣೆಯಲ್ಲಿ ಖಾತೆ ನಂ.231/301ರಲ್ಲಿನ ನಿವೇಶನ ಮತ್ತು ಹೆಂಚಿನ ಮನೆಯ ಖಾತೆಯು ಲಕ್ಷ್ಮೀನರಸಿಂಹಯ್ಯ ಬಿನ್ ಹನುಮಂತಪ್ಪ ಇವರ ಹೆಸರಿನಲ್ಲಿದ್ದು, ಈ ಖಾತೆಯನ್ನು ದಾನಪತ್ರದ ಆಧಾರದ ಮೇಲೆ ಶ್ರೀರಂಗಯ್ಯ ಬಿನ್ ರಂಗಶಾಮಯ್ಯ ಅವರ ಹೆಸರಿಗೆ ಬದಲಾವಣೆ ಮಾಡಿರುವುದಾಗಿ ಮುಟೇಷನ್ ರಿಜಿಸ್ಟರ್‌ನಲ್ಲಿ ಷರಾ ಬರೆಯಲಾಗಿದೆ. ಈ ರೀತಿ ಖಾತೆಯನ್ನು ಆರ್ ನಾಗರಾಜು ಅವರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದಾಗ ಬದಲಾಯಿಸಿದ್ದು, ಆದ್ದರಿಂದ ಸದರಿ ಪ್ರಕರಣದಿಂದ ತನ್ನನ್ನು ಕೈಬಿಡಬೇಕೆಂದು ಕೇಳಿಕೊಂಡಿದ್ದಾರೆ. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರು ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

ದೂರುದಾರರು ಸಲ್ಲಿಸಿದ ದೂರು, ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ಶ್ರೀರಂಗಯ್ಯನವರಿಗೆ ಖಾತೆ ನಂ.301 ಬದಲಾವಣೆಯಾಗಿದ್ದು, ಇದನ್ನು ನೊಂದಾಯಿತವಲ್ಲದ ದಾನಪತ್ರದ ಆಧಾರದ ಮೇರೆಗೆ ದಿ:05.04.2016ರಂದು ಎಂ.ಆರ್.ನಂ.1/2016ರ ಮೇರೆಗೆ ಖಾತೆ ಬದಲಾವಣೆ ಮಾಡಿದ್ದು ಕಂಡುಬರುತ್ತದೆ. ಮ್ಯುಟೇಷನ್ ಅಂಗೀಕಾರದ ಷರಾದಲ್ಲಿ ದಾನಪತ್ರದ ಮೂಲಕ ಖಾತೆ ಬದಲಾವಣೆ ಮಾಡಿದ್ದು ಯಾವುದೇ ತಂಟೆ ತಕರಾರು ಬಂದಿಲ್ಲವೆಂದು ನಮೂದಿಸಿರುತ್ತಾರೆ.

ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಖಾತೆ ಬದಲಾವಣೆ ಮಾಡುವಾಗ ನೋಂದಯಿತ ದಾಖಲಾತಿ ಪತ್ರವಿದ್ದಾಗ ಮಾತ್ರ ಸಂಬಂಧಿಸಿದ ಪಕ್ಷಕಾರರಿಗೆ ನೋಟೀಸು ನೀಡಿ ಯಾವುದೇ ತಕರಾರು ಬರದಿದ್ದಾಗ ಮಾತ್ರ

ಖಾತೆ ಬದಲಾವಣೆ ಮಾಡಬೇಕಾಗುತ್ತದೆ. ಆದರೆ ಈ ಖಾತೆ ಬದಲಾವಣೆಯಲ್ಲಿ ನೊಂದಾಯಿತವಲ್ಲದ ದಾಖಲೆಯ ಆಧಾರದ ಮೇಲೆ ಖಾತೆ ಬದಲಾವಣೆ ಮಾಡಿದ್ದು, ಸದರಿ ಆಸ್ತಿಗೆ ದೂರುದಾರರು ಸಹ ವಾರಸುದಾರರು ಇರುವುದರಿಂದ ಎದುರುದಾರರಾದ ಶ್ರೀ ಆರ್ ನಾಗರಾಜು ಅವರು ಅಕ್ರಮ ಖಾತೆ ಬದಲಾವಣೆ ಮಾಡಿ, ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಆದುದರಿಂದ, ಎದುರುದಾರರು ಸರ್ಕಾರಿ ನೌಕರರಾಗಿದ್ದು, ಶ್ರೀ ಆರ್ ನಾಗರಾಜು, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಸಿದ್ದಾಪುರ ಗ್ರಾಮ ಪಂಚಾಯತ್, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1) (i) ಮತ್ತು (ii) ಅಡಿಯಲ್ಲಿ ದುರ್ನಡತೆ/ದುರ್ವತನೆ ಕಂಡು ಬಂದಿರುವುದರಿಂದ, ಸದರಿ ಎದುರುದಾರರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14-ಎ ರಡಿಯಲ್ಲಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/672/ಗ್ರಾಪಂಕಾ/2017 ಬೆಂಗಳೂರು, ದಿನಾಂಕ: 24-08-2017.</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಆರ್ ನಾಗರಾಜು, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಸಿದ್ದಾಪುರ ಗ್ರಾಮ ಪಂಚಾಯತ್, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**<u>ಗೆ,</u>**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 22 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಮಧುಗಿರಿ, ತುಮಕೂರು ಜಿಲ್ಲೆ.
6. ಶ್ರೀ ಆರ್ ನಾಗರಾಜು, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಸಿದ್ದಾಪುರ ಗ್ರಾಮ ಪಂಚಾಯತ್ ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
8. ಗಣಕ ಕೋಶ.